ದಿನಾಂಕಃ 03-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ದೂರುದಾರರ ಪರ ವಕೀಲರಿಂದ,

1) ನಾನು ದೂರುದಾರರ ಚೀಟ್ ಪಂಡ್ ನಲ್ಲಿ 2020 ನೇ ಸಾಲಿನಲ್ಲಿ ಹುಣಸೂರು ಶಾಖೆಯಲ್ಲಿ ಸದಸ್ಯನಾಗಿರುತ್ತೇನೆ. ನನ್ನ ಪತ್ನಿ ಅಗಸ್ಟ್ 2020 ನೇ ಸಾಲಿನಲ್ಲಿ ದೂರುದಾರರ ಬಳಿ ಚೀಟಿ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಚೀಟಿ ಹಣವನನ್ನು ಪಡೆದುಕೊಳ್ಳುವಾಗ ದೂರುದಾರರ ಕಂಪನಿಯವರು ನನ್ನಿಂದ ಸಹಿ ಮಾಡಿದ ಮೂರು ಖಾಲಿ ಚೆಕ್ಕುಗಳನ್ನು ಪಡೆದುಕೊಂಡಿರುವ ಬಗ್ಗೆ ಸ್ವೀಕೃತಿಯನ್ನು ನೀಡಿರುತ್ತಾರೆ. ನಾನು 3,60,000/- ಹಣವನ್ನು ಚೀಟಿ ಹಣವನ್ನು ಪಡೆದುಕೊಂಡಿರುತ್ತೇನೆ. ನಾನು ಏಪ್ರೀಲ್ 2022 ರಲ್ಲಿ ಸದರಿ ಮೊತ್ತವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲಾತಿಯನ್ನು ತೋರಿಸಿ ಸದರಿ ದಾಖಲೆಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಪಿ-06 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು ನಿಪಿ-06(ಎ) ಎಂದು ಗುರುತಿಸಲಾಯಿತು.

2) ನಾನು ಮುಚ್ಚಳಿಕೆ ಪತ್ರ ಬರೆದುಕೊಟ್ಟಿರುವ ಬಗ್ಗೆ ಈಗ ನನಗೆ ನೆನಪಿರುವುದಿಲ್ಲ. ನಾನು ಪಡೆದುಕೊಂಡ ಚೀಟಿ ಹಣದ ಸಾಲಕ್ಕೆ ನನ್ನ ಪತ್ನಿ ಜಾಮೀನುದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ತನ್ನ ಪತ್ನಿ ಸಹಿ ಇರುವ ದಾಖಲಾತಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-07 ಎಂದು ಗುರುತಿಸಲಾಯಿತು. ನಿಪಿ-01 ಚೆಕ್ಕು ನನ್ನ ಖಾತೆಗೆ ಸಂಬಂಧಿಸಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಮತ್ತು ನನ್ನ ಪತ್ನಿ ಅನ್ಯೋನ್ಯವಾಗಿರುತ್ತೇವೆ. ನನ್ನ ಪತ್ನಿ ದೂರುದಾರರ ಕಂಪನಿಯಲ್ಲಿ ಸದಸ್ಯರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಪತ್ನಿ ವಿರುದ್ಧ ಚೆಕ್ಕು ಅಮಾನ್ಯ ಪ್ರಕರಣ ದಾಖಲು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಚೀಟಿ

ಹಣಕ್ಕೆ ನನ್ನ ಪತ್ನಿ ಜಾಮೀದಾರರಾಗಿದ್ದು, ನನ್ನ ಪತ್ನಿ ಚೀಟಿ ಹಣಕ್ಕೆ ನಾನು ಜಾಮೀನುದಾರಾನಾಗಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 18/09/2021 ರಂದು ಆಗಿರುವ ದಾಖಲೆಯಲ್ಲಿ ಸಾಕ್ಷಿಯು ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-08 ಎಂದು ಗುರುತಿಸಲಾಯಿತು .

ಮುಂದುವರೆದ ಪಾಟೀ ಸವಾಲು ವಿಚಾರಣೆಯನ್ನು 3.00 ಗಂಟೆಗೆ ಮುಂದೂಡಲಾಯಿತು.

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ** ದೂರುದಾರರ ಪರ ವಕೀಲರಿಂದ,

3) ನಿಡಿ-01 ರಲ್ಲಿ ಇರುವ ಬರವಣಿಗೆ ನನ್ನದೇ ಆಗಿರುತ್ತದೆ. ಆದರೆ ಸಹಿಯನ್ನು ಉದಯರವಿ ಚೀಟ್ ಪಂಡ್ಸ್ ನ ಕಚೇರಿಯ ಗುಮಾಸ್ತರಾದ ರಜನಿಯವರು ಮಾಡಿರುತ್ತಾರೆ. ಮುಚ್ಚಳಿಕೆ ಪತ್ರದಲ್ಲಿ ನನ್ನಿಂದ ಮೂರು ಚೆಕ್ಕುಗಳನ್ನು ಪಡೆದುಕೊಂಡಿರುತ್ತಾರೆ ಎಂದು ಬರೆದಿರುವುದಿಲ್ಲ. ನನ್ನ ಪ್ರತ್ಯುತ್ತರದಲ್ಲಿ ಮೂರು ಚೆಕ್ಕುಗಳನ್ನು ಪಡೆದುಕೊಂಡ ಬಗ್ಗೆ ತಿಳಿಸಿರುವುದಿಲ್ಲ. ನಿಡಿ-01 ರಲ್ಲಿ ಇರುವ ಸಹಿ ರಜನಿಯವರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನಿಂದ ಪಡೆದ ಚೆಕ್ಕುಗಳನ್ನು ವಾಪಸ್ಸ ನೀಡದೇ ಮೋಸ ಮಾಡಿರುವ ಬಗ್ಗೆ ನಾನು ಪೋಲಿಸ್ ದೂರು ದಾಖಲು ಮಾಡಿರುತ್ತೇನೆ. ದೂರುದಾರರು ನನ್ನಿಂದ ಖಾಲಿ ಚೆಕ್ಕುಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

4) ನಾನು ಚೆಕ್ಕುಗಳನ್ನು ವಾಪಸ್ಸು ಕೋರಿ ವಕೀಲರ ಮೂಲಕ ತಿಳುವಳಿಕೆ ಪತ್ರ ಕಳುಹಿಸಿರುವುದಿಲ್ಲ. ನಾನು ಪೋಲಿಸ್ ದೂರನ್ನು ಈ ಪ್ರಕರಣ ದಾಖಲು ಆದ ನಂತರ ನೀಡಿರುತ್ತೇನೆ. ನನ್ನ ಪತ್ನಿ ಚೀಟಿ ಹಣ ಪಾವತಿ ಮಾಡದ ಕಾರಣ ನಾನು ಜಾಮೀನುದಾರನಾಗಿದ್ದು, ಚೀಟಿ ಹಣ ಮರುಪಾವತಿ ಮಾಡುವಂತೆ ಕೇಳಿರುತ್ತಾರೆ

ಎಂದರೆ ಸರಿಯಲ್ಲ. ಸದರಿ ಚೀಟಿ ಹಣದ ಭದ್ರತೆಗಾಗಿ ನಾನು ನಿಪಿ-01 ಚೆಕ್ಕನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪತ್ನಿ ವಿರುದ್ಧ ಚೆಕ್ಕು ಅಮಾನ್ಯ ಪ್ರಕರಣಗಳು ಬಾಕಿ ಇರುತ್ತವೆ ಎಂದರೆ ಸರಿ. ನನ್ನ ಪತ್ನಿ ದೂರುದಾರರ ಕಂಪನಿಯ ಹಣವನ್ನು ಬಾಕಿ ಉಳಿಸಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಹೆಂಡತಿ ಬಾಕಿ ಉಳಿಸಿರುವ ಹಣವನ್ನು ಮರುಪಾವತಿಗಾಗಿ ನಾನು ಚೆಕ್ಕನ್ನಲು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ